ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181 ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

–ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಆರುಷಿ ಕೊಲೆ ಪ್ರಕರಣ : ನೂಪುರ್ ದಂಪತಿ ಖುಲಾಸೆ

ದೇಶದಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿದ್ದ 14 ವರ್ಷ ಪ್ರಾಯದ ಆರುಷಿ ತಲ್ವಾರ್ ಹಾಗೂ ಹೇಮರಾಜ್ ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ರಾಜೇಶ್ ತಲ್ವಾರ್ ಮತ್ತು ನೂಪುರ್ ತಲ್ವಾರ್ ದಂಪತಿಯನ್ನು ಗುರುವಾರ ಅಲಹಾಬಾದ್ ಹೈಕೋರ್ಟ್ ಖುಲಾಸೆಗೊಳಿಸಿ ಮಹತ್ವದ ತೀರ್ಪು ನೀಡಿದೆ.

ಪೆರೋಲ್ ಮುಕ್ತಾಯ : ಮತ್ತೆ ಜೈಲು ಸೇರಿದ ಶಶಿಕಲಾ

ಅನಾರೋಗ್ಯದಿಂದ ಬಳಲುತ್ತಿರುವ ಪತಿ ನಟರಾಜನ್ ಅವರ ಭೇಟಿಗಾಗಿ ಐದು ದಿನಗಳ ಪೆರೋಲ್ ಮೇಲೆ ಬಿಡುಗಡೆಯಾಗಿದ್ದ ಎಐಎಡಿಎಂಕೆ ಉಚ್ಚಾಟಿತ ಪ್ರಧಾನ ಕಾರ್ಯದರ್ಶಿ ಶಶಿಕಲಾ ಅವರು ಗುರುವಾರ ಮತ್ತೆ ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ. ಶಶಿಕಲಾ ಅವರ 5 ದಿನಗಳ ಪರೋಲ್ ಅವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಎಐಎಡಿಎಂಕೆ ನಾಯಕಿ ಗುರುವಾರ ಸಂಜೆ 4ರ ಸುಮಾರಿಗೆ ಪರಪ್ಪನ ಅಗ್ರಹಾರ ಜೈಲಿಗೆ ವಾಪಸ್ಸಾಗಿದ್ದಾರೆ.

‘ಮಹಾತ್ಮ ಗಾಂಧಿ ಹತ್ಯೆಯಿಂದ ಕಾಂಗ್ರೆಸ್‌ಗೆ ಲಾಭವಾಗಿದೆ’

ಮಹಾತ್ಮ ಗಾಂಧಿ ಹತ್ಯೆಯಿಂದ ಕಾಂಗ್ರೆಸ್‌ಗೆ ಲಾಭವಾಗಿದೆ. ಅವರು ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಪಕ್ಷವನ್ನು ವಿಸರ್ಜನೆ ಮಾಡಬೇಕು ಎಂದಿದ್ದರು ಎಂದು ಕೇಂದ್ರ ಸಚಿವೆ ಉಮಾ ಭಾರತಿ ಅವರು ಗುರುವಾರ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಗೋಡ್ಸೆ ಗಾಂಧಿಯವರನ್ನು ಕೊಂದಿರಬಹುದು. ಆದರೆ ಅವರ ಹತ್ಯೆಯಿಂದ ಯಾರಿಗೆ ಲಾಭವಾಗಿದೆ ಮತ್ತು ಹತ್ಯೆಗೆ ಪ್ರಚೋದನೆ ಕೊಟ್ಟವರು ಯಾರು ಎಂದು ಪ್ರಶ್ನಿಸಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :335 ಶುಕ್ರವಾರ ಅ.13, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಬರಿದಾಗುತ್ತಿದೆ ಜಿಲ್ಲೆಯ ಜೀವನಾಡಿ ಹೇಮಾವತಿ ಜಲಾಶಯ

■ ಒಳ ಹರಿವಿಗಿಂತ ಹೊರ ಹರಿವೇ ಹೆಚ್ಚಳ ■ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆ ■ ರೈತರ ಹಿತ ಕಾಪಾಡುವವರಾರು?

■ ವೆಂಕಟೇಶ್

ಹಾಸನ : ಜಿಲ್ಲೆಯ ಜೀವನಾಡಿ ಹೇಮಾವತಿ ಜಲಾಶಯ ಬರಿದಾಗುತ್ತಲೇ ಇದೆ. ನಮ್ಮ ಜಲಾನಯನ ವ್ಯಾಪ್ತಿಯಲ್ಲಿ ಈ ವರ್ಷ ಭಾರೀ ಪ್ರಮಾಣದಲ್ಲೇನು ಮಳೆಯಾಗಲಿಲ್ಲ, ಆದರೂ ಹೇಮಾವತಿ ಜಲಾಶಯದಿಂದ ನೀರನ್ನು ಹೊರ ಬಿಡಲಾಗುತ್ತಿದೆ.

ಈ ಪರಿಣಾಮ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿಗೂ ತತ್ವಾರ ಎದುರಾಗಲಿದೆ. ರೈತರು ಸಂಕಷ್ಟಕ್ಕೆ ಸಿಲುಕಿಕೊಳ್ಳುವ ಸಾಧ್ಯತೆ ಇದೆ.

ವಿಪರ್ಯಾಸ ಎಂದರೆ, ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಒಳ ಹರಿವು ಕಡಿಮೆ ಇದೆ. ಆದರೆ ಜಲಾಶಯದಿಂದ ಹೊರ ಹರಿವು ಹೆಚ್ಚಳವಾಗಿದೆ.

ಗುರುವಾರ ಜಲಾಶಯಕ್ಕೆ ಕೇವಲ 2320 ಕ್ಯೂಸೆಕ್ ನೀರು ಹರಿದು ಬರುತ್ತಿದ್ದರೆ, ಜಲಾಶಯದಿಂದ 3500 ಕ್ಯೂಸೆಕ್‌ಗೂ ನೀರನ್ನು ಹೊರ ಬಿಡಲಾಗುತ್ತಿದೆ. ಕಳೆದ ಒಂದು ತಿಂಗಳಿನಿಂದಲೂ ಭಾರೀ ಪ್ರಮಾಣದಲ್ಲಿಯೇ ನೀರು ಹರಿದು ಹೋಗಿರುವುದು ಜನರ ದುಗುಡಕ್ಕೆ ಕಾರಣವಾಗಿದೆ.

ಹಾಗೆ ನೋಡಿದರೆ ಮಂಡ್ಯ, ಮೈಸೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ಈ ವರ್ಷ ಮುಸಲಧಾರೆ ಸಾಧಾರಣಕ್ಕಿಂತ ಹೆಚ್ಚಾಗಿದೆ. ತುಮಕೂರಿನಲ್ಲಿ ಒಂದೇ ದಿನ 18 ಸೆಂ.ಮೀ. ಮಳೆಯಾದ ವರದಿ ಇದೆ. ಮೈಸೂರು ಜಿಲ್ಲೆಯಲ್ಲಿಯೂ ವರುಣ ಅಬ್ಬರಿಸಿದ್ದಾನೆ. ಮಂಡ್ಯ ಭಾಗದಲ್ಲಿಯೂ ಉತ್ತಮ ಮಳೆಯಾಗಿದೆ. ಆದರೆ ಜಿಲ್ಲೆಯಲ್ಲಿ ಮಳೆ ಅಬ್ಬರಿಸಿಲ್ಲ.

ಈಗ ನೀರಿನ ಬೇಡಿಕೆ ತುಂಬಾ ಇದ್ದು, ಮುಂಬರುವ ದಿನಗಳಲ್ಲಿ ಸಮಸ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. *(-4ನೇ ಪುಟಕ್ಕೆ)*

ಅಧಿಕಾರಿಗಳ ವಾದ ಏನು?

ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳು ಆತಂಕಗೊಂಡಿದ್ದರೆ, ಹೇಮಾವತಿ ಜಲಾಶಯ ಅಧಿಕಾರಿಗಳು ಮಾತ್ರ ನಿರುಮ್ಮಳವಾಗಿದ್ದಾರೆ. ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ. ಒಳ ಹರಿವಿಗಿಂತ ಹೊರ ಹರಿವು ಹೆಚ್ಚಳವಾಗಿರುವ ಬಗ್ಗೆ ಪತ್ರಿಕೆಯು ಗಮನ ಸೆಳೆಯಿತು.

ಇದಕ್ಕೆ ಜಲಾಶಯದ ಅಧಿಕಾರಿಯೊಬ್ಬರು, ಅಂಥ ತೊಂದರೆಯೇನೂ ಎದುರಾಗುವುದಿಲ್ಲ. 11.60 ಟಿ.ಎಂ.ಸಿ. ನೀರು ಮುಂದಿನ ವರ್ಷದ ಜೂನ್‌ವರೆಗೂ ಆಗುತ್ತದೆ. ಆತಂಕ ಏಕೆ? ಇಲಾಖೆಗೆ ಮಳೆಯ ಪ್ರಮಾಣ ಇತ್ಯಾದಿಯ ಬಗ್ಗೆಯೂ ಮಾಹಿತಿ ಇದೆ. ನೀರು ಎಷ್ಟು ಆವಿಯಾಗುತ್ತದೆ? ಹೊರ ಹರಿವಿನ ಮಟ್ಟ ಎಷ್ಟಿರಬೇಕು ಎಂಬುದೆಲ್ಲವೂ ನಿಖರವಾಗಿಯೇ ಇದೆ ಎಂದರು.

ಪತ್ರಿಕೆಯು ಆ ಅಧಿಕಾರಿಗೆ ಪ್ರಶ್ನೆಗಳನ್ನು ಕೇಳುತ್ತಲೇ ಹೋಯಿತು. ನಾವಿಷ್ಟು ಹೇಳಬಹುದು. ತೊಂದರೆ ಆಗುವುದಿಲ್ಲ ಎಂದರು.

ಕೆರೆ ಕಟ್ಟೆಗಳಲ್ಲಿ ನೀರಿಲ್ಲದೆ ಜನರು ಸಂಕಷ್ಟ ಎದುರಿಸುತ್ತಿದ್ದಾರೆ? ಮುಂದೇನಾಗುತ್ತದೋ!?

ಪತ್ರಿಕೆ ಕಳಕಳಿ

ಈಗ್ಗೆ ಆರು ತಿಂಗಳ ಹಿಂದೆ ಜಿಲ್ಲೆಯ ಬಹುತೇಕ ಭಾಗದಲ್ಲಿ ಬರದ ತೀವ್ರತೆ ಇತ್ತು. ಇದು ಕಣ್ಣಿಗೆ ರಾಚುತ್ತಲೂ ಇತ್ತು. ಆದರೆ ಈಗ ವಸ್ತುಸ್ಥಿತಿ ಹಾಗಿಲ್ಲ. ಎಲ್ಲೆಡೆ ಹಸಿರಿದೆ, ಕಣ್ಣಿಗೆ ಮುದ ನೀಡುತ್ತಲೂ ಇದೆ.

ಆದರೆ ಮಳೆಯ ಪ್ರಮಾಣವೇನೂ ಸುಧಾರಿಸಿಲ್ಲ. ಹೇಮಾವತಿ ಜಲಾನಯನ ವ್ಯಾಪ್ತಿಯಲ್ಲಿ ವಿಪರೀತ ಮಳೆಯಾಗಿದ್ದರೆ ಈ ವರ್ಷ ಜಲಾಶಯ ಭರ್ತಿಯಾಗಬೇಕಿತ್ತು. ಜಲಾಶಯ ಭಣಗುಡುತ್ತಿರುವುದರಿಂದಲೇ ಪತ್ರಿಕೆ ಈ ಪ್ರಸ್ತಾಪ ಮುಂದಿಡುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವರು ಗಮನ ಹರಿಸಲಿ

ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರು ಈ ಬಗ್ಗೆ ಗಮನ ಹರಿಸುವರೇ? ಶುಕ್ರವಾರ ಜಿ.ಪಂ. ಹೊಯ್ಸಳ ಸಭಾಂಗಣದಲ್ಲಿ ಕೆಡಿಪಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಧಾರಕ್ಕೆ ಬರಬೇಕು.

ಅನ್ಯಾಯ ಇವೊತ್ತಿನದೇನಲ್ಲ

ನಮಗೆ ಅನ್ಯಾಯವಾಗಿರುವುದು ಇವೊತ್ತಿನದೇನಲ್ಲ. ಜಿಲ್ಲೆಯ ಜನರ ನೀರಿನ ಬೇಡಿಕೆಗನುಗುಣವಾಗಿ ಹಿಂದಿನ ಜನಪ್ರತಿನಿಧಿಗಳು ದೂರದೃಷ್ಟಿ ಆಲೋಚನೆ ಹೊಂದಿ ಹೇಮಾವತಿ ಹಾಗೂ ಯಗಚಿ ಜಲಾಶಯವನ್ನು ನಿರ್ಮಿಸಿದರು.

ಹೇಮಾವತಿ ಹಾಗೂ ಯಗಚಿ ಎರಡು ಕಣ್ಣಿದ್ದಂತೆ ಎಂದು ರಾಜಕೀಯ ಪಕ್ಷಗಳ ಮುಖಂಡರು ಹೇಳುತ್ತಲೇ ಇದ್ದಾರೆ. ಇದೇನೇ ಇರಲಿ, ಹೇಮಾವತಿ ಜಲಾಶಯ ಇಲ್ಲಿದ್ದರೂ ಈ ಭಾಗದ ಜನರಿಗೆ ಹೆಚ್ಚಿನ ಪ್ರಯೋಜನವಾಗಿಲ್ಲ.

ಹೇಮಾವತಿ ಜಲಾನಯನ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಐದೂವರೆ ಲಕ್ಷ ಹೆಕ್ಟೇರ್ ಪ್ರದೇಶ ಬರುತ್ತದೆ. ಈ ಕೆಳಗೆ ನೀಡಿರುವ ಅಂಕಿ ಅಂಶಗಳಿಂದ ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚು ನೀರಾವರಿ ಪ್ರದೇಶ ಇಲ್ಲ ಎಂಬುದು ತಿಳಿದು ಬರುತ್ತದೆ. ಇದು ಅನ್ಯಾಯವಲ್ಲವೇ?

ಹಾಸನ : 1.23 ಲಕ್ಷ ಹೆಕ್ಟೇರ್
ತುಮಕೂರು : 3,84,000 ಹೆಕ್ಟೇರ್
ಮಂಡ್ಯ : 1,52,000 ಹೆಕ್ಟೇರ್

■ 5.5 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಅಚ್ಚುಕಟ್ಟು ಪ್ರದೇಶವಿದ್ದರೂ ಜಿಲ್ಲೆ ಕಡಿಮೆ ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಇವೆಲ್ಲವೂ ಅನ್ಯಾಯದ ಪರಮಾವಧಿಯಲ್ಲವೇ? ಏನಂತೀರಾ ಓದುಗರೇ?

ಜಲಾಶಯದ ಮಟ್ಟ

ಹೇಮಾವತಿ ಜಲಾಶಯ ಭಣಗುಡುತ್ತಿದೆ ಎನ್ನುವುದಕ್ಕೆ ಇದೊಂದು ಸ್ಯಾಂಪಲ್. ಈ ಬಾರಿ ಕೇವಲ 11.60 ಟಿ.ಎಂ.ಸಿ. ಮಾತ್ರ ನೀರಿದೆ. ಈ ನೀರು ಮುಂದಿನ ಜೂನ್‌ವರೆಗೂ ಸಾಕಾಗುತ್ತದೆ.

ಸಂಗ್ರಹ ಸಾಮರ್ಥ್ಯ (ಅಡಿಗಳಲ್ಲಿ-ಗರಿಷ್ಠ)	**ಪ್ರಸ್ತುತ ಸಂಗ್ರಹ (ಅಡಿಗಳಲ್ಲಿ)**
2922	2884.77
ಸಂಗ್ರಹ ಸಾಮರ್ಥ್ಯ (ಟಿ.ಎಂ.ಸಿ.ಗಳಲ್ಲಿ)	**ಪ್ರಸ್ತುತ ಸಂಗ್ರಹ (ಟಿ.ಎಂ.ಸಿ.ಗಳಲ್ಲಿ)**
37.103	11.60
ಒಳ ಹರಿವು	**ಹೊರ ಹರಿವು**
2320 ಕ್ಯೂಸೆಕ್	3500 ಕ್ಯೂಸೆಕ್

■ ನೀರಿನ ಸಂಗ್ರಹ ಕಡಿಮೆ ಇದೆ ಎಂದು ಅನ್ನಿಸುವುದಿಲ್ಲವೇ? ನಮ್ಮ ಜಲಾಶಯದ ಅಧಿಕಾರಿಗಳು ಮಾತ್ರ ಈ ವಾದವನ್ನು ಅಲ್ಲಗಳೆಯುತ್ತಾರೆ. ಕುಡಿಯುವ ನೀರಿಗೆ ತೊಂದರೆ ಎದುರಾಗುವುದಿಲ್ಲ ಎಂದು ವಿವರಿಸುತ್ತಾರೆ.

ದೀಪದ ಕೆಳಗೆ ಕತ್ತಲು

ದೀಪದ ಕೆಳಗೆ ಕತ್ತಲು ಎಂಬ ಗಾದೆ ಕೇಳಿದ್ದೀರಾ. ಹೌದು, ಇದು ಅಕ್ಷರಶಃ ಸತ್ಯ. ದೀಪದ ಕೆಳಗೇ ಕತ್ತಲು.

ಜಿಲ್ಲಾ ಕೇಂದ್ರ ಹಾಸನ ನಗರದ ಸಮೀಪವಿರುವ ಗೊರೂರಿನಲ್ಲಿ ಹೇಮಾವತಿ ಜಲಾಶಯವಿದ್ದರೂ ಕುಡಿಯುವ ನೀರಿಗೆ ತೊಂದರೆ ಇದೆ.

ಅಮೃತ ಯೋಜನೆಯಡಿ ಕುಡಿಯುವ ನೀರು ಪೂರೈಕೆಗೆ ಕಾಮಗಾರಿ ಆರಂಭವಾಗಿದೆ. ಈ ಯೋಜನೆ ಅನುಷ್ಠಾನಗೊಂಡರೆ ಅನುಕೂಲವಾಗಬಹುದು.

ಯಗಚಿ ಜಲಾಶಯದ ಕಥೆಯನ್ನಂತೂ ವಿವರಿಸಬೇಕಿಲ್ಲ. ಒಟ್ಟಾರೆ ಇಲ್ಲಿ ಎರಡು ಜಲಾಶಯಗಳಿದ್ದರೂ ಜನರಿಗೆ ತೊಂದರೆ ತಪ್ಪಿಲ್ಲ. ಬೇಡಿಕೆ ಹೆಚ್ಚಿದ್ದರೂ, ಇದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಹಾಗಾಗಿಯೇ ಪ್ರತಿನಿತ್ಯ ಜನರು ಕುಡಿಯುವ ನೀರಿಗಾಗಿ ಹಕ್ಕೊತ್ತಾಯ ಮಂಡಿಸುತ್ತಲೇ ಇದ್ದಾರೆ.

ಜಿಲ್ಲೆಯಲ್ಲಿರುವ ಕೆರೆಗಳು ತುಂಬಿಲ್ಲ. ಜಲಾಶಯದಿಂದ ಕೆರೆಗೆ ತುಂಬಿಸಲು ನೀರು ಹರಿಸಬೇಕೆಂಬ ಒತ್ತಡವಿದ್ದರೂ ಪ್ರಯೋಜನವಾಗಿಲ್ಲ. ಅಲ್ಲಲ್ಲಿ ಚದುರಿದಂತೆ ಮಳೆಯಾಗಿದ್ದರೂ ಕೆರೆ ಕಟ್ಟೆಗಳಲ್ಲಿ ನೀರಿಲ್ಲ. ನಮ್ಮನ್ನಾಳುವ ವರ್ಗಕ್ಕೆ ಇವೆಲ್ಲಾ ಹೊಳೆದಿಲ್ಲವೇ?



“ನೀರಿನ ಸಂಗ್ರಹ ಕಡಿಮೆಯಾಗಿರುವುದು ತಮ್ಮ ಗಮನಕ್ಕೂ ಬಂದಿದೆ. ಕೂಡಲೇ ಜಲಾಶಯದ ಅಧಿಕಾರಿಗಳು ನೀರು ಹರಿವು ನಿಲ್ಲಿಸದಿದ್ದರೆ ಮತ್ತೆ ಹೋರಾಟ ಆರಂಭಿಸಬೇಕಾಗುತ್ತದೆ ರೈತರು ತೊಂದರೆಗೊಳಗಾಗಲಿದ್ದಾರೆ. ಕುಡಿಯುವ ನೀರಿಗೂ ಹಾಹಾಕಾರ ಪರಿಸ್ಥಿತಿ ಎದುರಾಗಲಿದೆ. ಜಿಲ್ಲಾಡಳಿತ ಎಚ್ಚೆತ್ತುಕೊಳ್ಳಬೇಕು. *–ಪಟೇಲ್ ಶಿವರಾಂ, ವಿಧಾನ ಪರಿಷತ್ ಮಾಜಿ ಸದಸ್ಯ.*



“ಹೇಳೋರು ಕೇಳೋರು ಯಾರೂ ಇಲ್ಲಿಲ್ಲ. ಸಂಸದ ಹೆಚ್.ಡಿ.ದೇವೇಗೌಡರು ಕೂಡ ಪರಿಶೀಲನೆ ನಡೆಸಿ ಕಳವಳ ವ್ಯಕ್ತಪಡಿಸಿದ್ದಾರೆ. ತುಮಕೂರು, ಮಂಡ್ಯದಲ್ಲಿ ಮಳೆ ಆಗಿದೆ. ನೀರು ನಿಲ್ಲಿಸ'ಲ'ೇ ಬೇಕು. ಅಧಿಕಾರಿಗಳಿಗೆ ಇದು ಏಕೆ ಅರ್ಥವಾಗುತ್ತಿಲ್ಲವೋ ಗೊತ್ತಿಲ್ಲ. ಶುಕ್ರವಾರ ನಡೆಯುವ ಕೆಡಿಪಿ ಸಭೆಯಲ್ಲಿ ಈ ಕುರಿತು ಗಮನ ಸೆಳೆಯುತ್ತೇನೆ.

–ಹೆಚ್.ಎಸ್.ಪ್ರಕಾಶ್
ಶಾಸಕ, ಹಾಸನ ಕ್ಷೇತ್ರ

“ಹೇಮಾವತಿ ಜಲಾನಯನ ವ್ಯಾಪ್ತಿಯಲ್ಲಿ ಮಳೆಯಾಗಿಲ್ಲ, ಜಿಲ್ಲೆಯಲ್ಲಿ ಭಾರೀ ಪ್ರಮಾಣದಲ್ಲಿ ಮಳೆಯಾಗದಿರುವುದು ಗೊತ್ತೇ ಇದೆ. ಜಲಾಶಯದಿಂದ ನೀರು ಹರಿಸುತ್ತಿರುವುದು ಅವೈಜ್ಞಾನಿಕ ಕ್ರಮ. ಇದನ್ನು ನಾನೂ ಕೂಡ ವಿರೋಧಿಸುತ್ತೇನೆ. ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವರಿಕೆ ಮಾಡಿಕೊಡುತ್ತೇನೆ.

–ಗೋಪಾಲಸ್ವಾಮಿ, ವಿಧಾನ ಪರಿಷತ್ ಸದಸ್ಯ

ಶಕ್ತಿ ದೇವತೆ ಹಾಸನಾಂಬೆ ದರ್ಶನ ಆರಂಭ

ಹಾಸನ : ವರ್ಷಕ್ಕೊಮ್ಮೆ ದರ್ಶನ ನೀಡುವ ಜಿಲ್ಲೆಯ ಶಕ್ತಿ ದೇವತೆ ಹಾಗೂ ಗ್ರಾಮ ದೇವತೆ ಶ್ರೀ ಹಾಸನಾಂಬೆ ದೇವಾಲಯದ ಬಾಗಿಲನ್ನು ಗುರುವಾರ ಮಧ್ಯಾಹ್ನ 12.31ಕ್ಕೆ ಸರಿಯಾಗಿ ಶುಭ ಲಗ್ನದಲ್ಲಿ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸುವ ಮೂಲಕ ತೆರೆಯಲಾಯಿತು.

ದೇವಾಲಯದ ಮುಂಭಾಗದಲ್ಲಿ ನೆಡಲಾಗಿದ್ದ ಬಾಳೆಕಂದನ್ನು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಂತೆ ಅರಸು ಮನೆತನದ ಹಿರಿಯರಾದ ನರಸಿಂಹರಾಜೇ ಅರಸು ಅವರು ಕತ್ತರಿಸಿದ ಬಳಿಕ ದೇವಾಲಯದ ಬಾಗಿಲಿಗೆ ಪೂಜೆ ನೆರವೇರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸೇರಿದಂತೆ ಜನಪ್ರತಿನಿಧಿಗಳು, ಸ್ಥಳೀಯ ಅಧಿಕಾರಿಗಳ ಸಮ್ಮುಖದಲ್ಲಿ ತಳವಾರ ಮನೆತನದವರ ನೇತೃತ್ವದಲ್ಲಿ ಅರ್ಚಕರು ಬಾಗಿಲು ತೆರೆದರು. ಬಾಗಿಲು ತೆಗೆಯುತ್ತಿದ್ದಂತೆ ಅಲ್ಲಿ ನೆರೆದಿದ್ದ ಭಕ್ತರು ಜಯಘೋಷಗಳನ್ನು ಮೊಳಗಿಸಿದರು. ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ಭಕ್ತರು ಸಾಕ್ಷಿಯಾದರು. ಅದ್ದೂರಿ ಚಾಲನೆಯೂ ದೊರಕಿತು.

ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ಹೂವು ಬಾಡಿರಲಿಲ್ಲ, ದೀಪ ಆರಿರಲಿಲ್ಲ. ಇದು ಶುಭಸೂಚಕವಾದುದು ಎಂದರು.

ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಕೂಡ ಆಶ್ಚರ್ಯಚಕಿತರಾಗಿದ್ದರು. ದೀಪ ಆರಿರಲಿಲ್ಲವೆಂದು ತಿಳಿಸಿದರು. ನಾನು ಒಳ ಹೋಗಿದ್ದಾಗ ಈ ಘಟನೆಯನ್ನು ಕಣ್ಣಾರೆ ಕಂಡೆ ಎಂದು ಭಾವಪರವಶರಾದರು.

ಅ.20ರಂದು ಮಧ್ಯರಾತ್ರಿ 12 ಗಂಟೆವರೆಗೆ ದರುಶನ ಭಾಗ್ಯ ಇರುತ್ತದೆ. 21ರಂದು ಮಧ್ಯಾಹ್ನ ದೇವಾಲಯದ ಬಾಗಿಲು ಮುಚ್ಚಿದರೆ ಮತ್ತೆ ಮುಂದಿನ ವರ್ಷವೇ ತೆಗೆಯುವುದು.

ಆರದ ದೀಪ

ದೇವಾಲಯದ ಬಾಗಿಲು ತೆರೆದಾಗ ದೀಪ ಆರಿರಲಿಲ್ಲ. ಕಳೆದ ವರ್ಷ ಇಟ್ಟಿದ್ದ ನೈವೇದ್ಯ ಕೆಟ್ಟಿರಲಿಲ್ಲ. ಹೂಗಳು ಬಾಡಿರಲಿಲ್ಲ.

ಭಕ್ತರಿಗೆ ಉಚಿತ ಪ್ರಸಾದ

ದೇವಿ ದರ್ಶನಕ್ಕೆ ಆಗಮಿಸಿದ್ದ ಎಲ್ಲ ಭಕ್ತರಿಗೂ ಉಚಿತ ಪ್ರಸಾದವಾಗಿ ಪುಳಿಯೋಗರೆ, ಮೊಸರನ್ನ ವಿತರಿಸಲಾಯಿತು. ಮಳೆಯನ್ನೂ ಲೆಕ್ಕಿಸದೆ ನೂಕುನುಗ್ಗಲಿನಲ್ಲೇ ಭಕ್ತರು ದೇವಿ ದರ್ಶನ ಪಡೆದು ಅಮ್ಮನ ಕೃಪೆಗೆ ಪಾತ್ರರಾಗುತ್ತಿದ್ದಾರೆ.

ಮೊದಲ ದಿನವೇ ನೂಕು ನುಗ್ಗಲು

ಅಬ್ಬಾ! ಮೊದಲ ದಿನವೇ ನೂಕು ನುಗ್ಗಲು. ಮಧ್ಯಾಹ್ನ 12.30ರ ಹೊತ್ತಿಗೆ ದೇಗುಲದ ಮುಂಭಾಗ ಭಾರೀ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಒಳ ಹೋಗಲು ಪ್ರಯಾಸಪಡಬೇಕಾಯಿತು. ಗರ್ಭಗುಡಿಯಲ್ಲಂತೂ ಉಸಿರುಗಟ್ಟಿದ ವಾತಾವರಣ, ನೂಕು ನುಗ್ಗಲು ಇತ್ತು.

ಪುಡಾರಿಗಳದ್ದೇ ಕಾರುಬಾರು

ಈ ವರ್ಷವೂ ಪುಡಾರಿಗಳದ್ದೇ ಕಾರುಬಾರು ಇತ್ತು. ದೇವರ ಸೇವೆ ಹೆಸರಿನಲ್ಲಿ ಗರ್ಭಗುಡಿಯ ಸುತ್ತ ಹಾಗೂ ದೇವಾಲಯದ ಹೊರಭಾಗ ಇವರೇ ನೆರೆದಿದ್ದರು. ಒಳ ಹೋಗಲೂ ಜಾಗ ಬಿಡುತ್ತಿರಲಿಲ್ಲ, ಇದರಿಂದ ಭಕ್ತರು ಪ್ರಯಾಸ ಪಡಬೇಕಾಯಿತು. ಬಾಗಿಲು ತೆರೆಯುವ ದಿನ ದೇವಿಯ ದರ್ಶನಕ್ಕೆ ಅವಕಾಶವಿಲ್ಲವಾದರೂ ಭಕ್ತ ಸಮೂಹ ಮಾತ್ರ ಭಾರೀ ಸಂಖ್ಯೆಯಲ್ಲಿತ್ತು.

ಪತ್ರಕರ್ತರಿಗೆ ವಿಪರೀತ ಕಿರಿಕಿರಿ

ಕರ್ತವ್ಯನಿರತ ಪತ್ರಕರ್ತರಂತೂ ವಿಪರೀತ ಕಿರಿಕಿರಿಗೆ ಒಳಗಾದರು. ಗರ್ಭಗುಡಿ ಪ್ರವೇಶಿಸುವುದಿರಲಿ, ದೇವಾಲಯ ಒಳ ಆವರಣಕ್ಕೆ ತೆರಳಲು ಕಷ್ಟಸಾಧ್ಯವಾಯಿತು. ಗುರುತಿನ ಚೀಟಿ ಇದ್ದವರಿಗೂ ಅಲ್ಲಲ್ಲಿ ತಡೆ ಹಿಡಿಯಲಾಯಿತು. ಒಳ ಹೋಗಲು ತೊಂದರೆ ಎದುರಾಯಿತು. ಜೇಬಿನಲ್ಲಿದ್ದ ಪೆನ್ನುಗಳು ಕೆಳಗೆ ಬಿದ್ದವು. ದೃಶ್ಯಮಾಧ್ಯಮದವರೂ ಒಳ ಹೋಗಲು ಹರಸಾಹಸ ಪಡಬೇಕಾಯಿತು.

ಕೆರೆಗಳಿಗೆ ನೀರು ತುಂಬಿಸೋದು ಎಂದು?

ಹಾಸನ : ಚನ್ನರಾಯಪಟ್ಟಣ ಹಾಗೂ ಸತ್ಯವಂಗಲ ಕೆರೆಗಳಿಗೆ ನೀರು ತುಂಬಿಸುವ ವ್ಯವಸ್ಥೆ ಆಗಬೇಕೆಂದು ಹಲವು ತಿಂಗಳುಗಳಿಂದ ನಗರದ ಹಿರಿಯ ನಾಗರಿಕರು, ಹಸಿರು ಭೂಮಿ ಪ್ರತಿಷ್ಠಾನದ ಸದಸ್ಯರು ಒತ್ತಾಯ ಮಾಡುತ್ತಾ ಬಂದಿದ್ದರೂ, ಜಿಲ್ಲಾಡಳಿತವಾಗಲೀ, ಸಚಿವ, ಶಾಸಕರಾಗಲೀ ಆಸಕ್ತಿ ವಹಿಸಿದಂತೆ ಕಾಣಲಿಲ್ಲ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಆಗುತ್ತಿದ್ದರೂ ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಕೆರೆ ಕಟ್ಟೆಗಳು ತುಂಬುವಷ್ಟು ಮಳೆ ಆಗಿಲ್ಲ.

ಹೇಮಾವತಿ, ಯಗಚಿ, ವಾಟೆಹೊಳೆ ನದಿಗಳಿಗೆ ನೀರು ಹರಿದು ಬರುವ ಪ್ರದೇಶಗಳಲ್ಲೂ ಸಾಕಷ್ಟು ಮಳೆ ಆಗಿಲ್ಲ. ಯಗಚಿ ನದಿಯಲ್ಲಂತೂ ನೀರೇ ಹರಿದು ಬರಲಿಲ್ಲ. ಹೇಮಾವತಿ ಅಣೆಕಟ್ಟೆಯ ನೀರು ದಿನದಿಂದ ದಿನಕ್ಕೆ ಖಾಲಿ ಆಗುತ್ತಿದೆ. ಮುಂದಿನ ಬೇಸಿಗೆ ಹೊತ್ತಿಗೆ ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಆದರೆ ಆಶ್ಚರ್ಯಪಡಬೇಕಿಲ್ಲ. ಹಿಂದಿನ ಕೆಲ ವರ್ಷಗಳಿಗೆ ಹೋಲಿಸಿದರೆ ಹಾಸನ ನಗರಕ್ಕೆ ಸಾಕಷ್ಟು ಮಳೆ ಆಗಿದೆ. ಬತ್ತಿ ಹೋಗಿದ್ದ ಕೊಳವೆ ಬಾವಿಗಳಲ್ಲೂ ನೀರು ಸಿಗುತ್ತಿದೆ. ಆದರೆ ಸತ್ಯವಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಹಾಕಿಸುವುದು ತಪ್ಪಿಲ್ಲ.

ನಗರದ ಸುತ್ತಮುತ್ತ ಕೊಳವೆ ಬಾವಿಗಳಲ್ಲಿ ಗಣನೀಯ ಪ್ರಮಾಣದಲ್ಲಿ ನೀರು ಸಿಗಬೇಕೆಂದರೆ ಮುಖ್ಯವಾಗಿ ಸತ್ಯವಂಗಲ ಹಾಗೂ ಚನ್ನಪಟ್ಟಣ ಕೆರೆಯ ಉಳಿದ ಭಾಗದಲ್ಲಾದರೂ ನೀರಿರಬೇಕು. ಈ ಬಾರಿ ಬಿದ್ದ ಮಳೆಯಲ್ಲಿ ಚನ್ನಪಟ್ಟಣ ಕೆರೆಗಳಲ್ಲಿ 50 ಎಕರೆ ಪ್ರದೇಶದಷ್ಟಾದರೂ ತುಂಬುತ್ತಿತ್ತು. ಈ ಬಗ್ಗೆ ಆಡಳಿತ ನಡೆಸುವವರು ಏಕೆ ಗಂಭೀರವಾಗಿ ಚಿಂತಿಸುತ್ತಿಲ್ಲವೆಂದು ಅರ್ಥವಾಗುತ್ತಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಮಳೆಗಾಲ ಮುಗಿಯಲಿದೆ. ತಕ್ಷಣ ನೀರು ತುಂಬಿಸದಿದ್ದರೆ ಮುಂದೆ ಪರಿತಪಿಸಬೇಕಾಗುತ್ತದೆ. ಹೇಮಾವತಿ ಅಣೆಕಟ್ಟೆಯಿಂದ ಸತ್ಯವಂಗಲ, ಚನ್ನಪಟ್ಟಣ ಕೆರೆಗಳಿಗೆ ನೀರು ಹರಿಸಬೇಕೆಂಬ ಒತ್ತಾಯ ಕೇಳಿ ಬರಲಿ. ಹಾಗಾಗಿ ಜಿಲ್ಲೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ್ತ ಗಮನ ಹರಿಸಲಿ.

ರಾಗಿ ಬೆಳೆಗೆ ಕೀಟ ಬಾಧೆ : ಸೂಕ್ತ ಔಷಧೋಪಚಾರಕ್ಕೆ ಸಲಹೆ

ಅರಸೀಕೆರೆ : ರೈತರು ಬೆಳೆದಿರುವ ರಾಗಿ ಸೇರಿದಂತೆ ಕೆಲವು ಬೆಳೆಗಳಿಗೆ ಕೀಟಬಾಧೆ ಕಾಣಿಸಿದ್ದು, ಇದರಿಂದ ಬೆಳೆಯನ್ನು ರಕ್ಷಿಸಲು ಸೂಕ್ತ ಔಷಧಿಗಳನ್ನು ಸಿಂಪಡಿಸಬೇಕು ಎಂದು ಕಾರೇಕೆರೆ ಕೃಷಿ ಕಾಲೇಜಿನ ಡಾ.ಮುನಿಸ್ವಾಮಿಗೌಡ ಹಾಗೂ ಡಾ.ಬಸವರಾಜು ಹೇಳಿದರು.

ತಾಲ್ಲೂಕಿನಲ್ಲಿ ರೈತರು ಬೆಳೆದಿರುವ ರಾಗಿ ಬೆಳೆಯ ಮೇಲೆ ಶೇ.50ರಷ್ಟು ಬೆಳೆ ಸೈನಿಕ ಹುಳು, ಕಟ್ಟರ್ ಹುಳುಗಳು ದಾಳಿ ಮಾಡಿದ್ದು, ಇದೇ ಪರಿಸ್ಥಿತಿ ಇನ್ನೊಂದೆರಡು ದಿನಗಳು ಮುಂದುವರೆದರೆ ಶೇ.80ರಷ್ಟು ರಾಗಿ ಬೆಳೆ ನಷ್ಟವಾಗಲಿದೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ, ಕೃಷಿ ಸಚಿವ ಕೃಷ್ಣ ಭೈರೇಗೌಡರೊಂದಿಗೆ ಮಾತುಕತೆ ನಡೆಸಿದ ಹಿನ್ನೆಲೆಯಲ್ಲಿ ಕೃಷಿ ಸಚಿವರ ನಿರ್ದೇಶನದ ಮೇರೆಗೆ ತಾಲ್ಲೂಕಿಗೆ ಆಗಮಿಸಿದ ಕೃಷಿ ವಿಜ್ಞಾನಿಗಳ ತಂಡ ಕಸಬಾ ಹೋಬಳಿ ಸೇರಿದಂತೆ ಗಂಡಸಿ ಹಾಗೂ ಕಣಕಟ್ಟೆ ಹೋಬಳಿಗಳಲ್ಲಿ ಗುರುವಾರ ಪ್ರವಾಸ ಮಾಡಿ ಅಧ್ಯಯನ ನಡೆಸಿತು.

ಡಾ.ಮುನಿಸ್ವಾಮಿಗೌಡ ಹಾಗೂ ಡಾ.ಬಸವರಾಜು ಮಾತನಾಡಿ, ರಾಗಿ ಬೆಳೆಯಲ್ಲಿ ಕಾಣಿಸಿಕೊಂಡಿರುವ ಕೀಟ ದಾಳಿಗೆ ರೈತರು ಆತಂಕಪಡುವ ಅಗತ್ಯವಿಲ್ಲ. ಡ್ರೈಕ್ಲೋರ್‌ವಾಸ್‌ನ್ನು 1 ಲೀಟರ್ ನೀರಿಗೆ 1 ಮಿ.ಲೀ ಸಿಂಪಡಿಸಿ ಅಥವಾ ಕ್ಲೋರ್‌ಪೈರಿಫಾಸ್‌ನ್ನು 1ಲೀಟರ್ ನೀರಿಗೆ 2ಮಿ.ಲೀ ಅಥವಾ ಲ್ಯಾಂಬ್ಡಸೈ ಹ್ಯಾಲೋಥ್ರೀನ್‌ನ್ನು 1ಲೀಟರ್ ನೀರಿಗೆ 1 ಮಿ.ಲೀ ಸಿಂಪಡಿಸಿ ಸಂಜೆಯ ಸಮಯದಲ್ಲಿ ರಾಗಿ ಗಿಡಗಳ ಮೇಲೆ ಸಿಂಪಡಿಸುವುದರಿಂದ ಶೇ.90ರಷ್ಟು ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.

ಕೃಷಿ ವಿಜ್ಞಾನಿಗಳು ತಾಲ್ಲೂಕಿನ ಹಿರೇಸಾದರಹಳ್ಳಿ, ಸೊಪ್ಪಿನಹಳ್ಳಿ, ಡಿ.ಎಂ.ಕುರ್ಕೆ, ಗೊಲ್ಲರಹಟ್ಟಿ ಗ್ರಾಮಗಳಿಗೆ ತೆರಳಿ ರಾಗಿ ಬೆಳೆ ಪರಿಶೀಲಿಸಿದರು. *(-4ನೇ ಪುಟಕ್ಕೆ)*

ಪ್ರಧಾನಿ ಮೋದಿಗೆ ಗಂಡಾಂತರ, ಕುಮಾರಸ್ವಾಮಿ ಸಿ.ಎಂ. ಆಗ್ತಾರಂತೆ



ಹಾಸನ : ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗಂಡಾಂತರ ಕಾದಿದೆಯಂತೆ ಮತ್ತು ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ ಎಂದು ಬ್ರಹ್ಮಾಂಡ ಗುರೂಜಿ ನರೇಂದ್ರ ಬಾಬು ಶರ್ಮಾ ಅವರು ಗುರುವಾರ ಹೇಳಿದ್ದಾರೆ.

ಗುರುವಾರ ಹಾಸನಾಂಬೆ ದೇವಾಲಯದ ಬಾಗಿಲು ತೆರೆಯಲಾಯಿತು. ಈ ವೇಳೆ ಮಾತನಾಡಿದ ಬ್ರಹ್ಮಾಂಡ ಗುರೂಜಿ ಅವರು, ಪ್ರಧಾನಿ ಮೋದಿ ಅವರದು ವೃಶ್ಚಿಕ ರಾಶಿ, ಅವರಿಗೆ ಶನಿ ಚೆನ್ನಾಗಿಲ್ಲ. ಶನಿ ಕೂತಾಗ ಯಾರನ್ನೂ ಬಿಡಲ್ಲ. ಗುರು ತುಲಾ ರಾಶಿಗೆ ಪ್ರವೇಶ ಮಾಡಿದ್ದಾನೆ. ಹೀಗಾಗಿ ಉನ್ನತ ಸ್ಥಾನದಲ್ಲಿದ್ದು, ಯಶೋಕೀರ್ತಿ ಹೊಂದಿರುವ ಸಿನಿಮಾ ಸ್ಟಾರ್ ಅಥವಾ ರಾಜಕಾರಣಿಗೆ ಗಂಡಾಂತರ ಕಾದಿದೆ. ಅವರು ದೇವರ ಮೊರೆಯಿಂದ ಪರಿಹಾರ ಕಂಡುಕೊಳ್ಳದೇ ಹೋದರೆ ಮೃತ್ಯು ಕೂಡ ಎದುರಾಗಬಹುದು ಎಂದಿದ್ದಾರೆ.

ತಾಯಿಯಿಂದ, ಹೆಣ್ಣಿಂದ(ಪತ್ನಿ) ದೂರ ಇರುವ ಪ್ರಧಾನಿಗೆ ಶುಕ್ರನಿಂದಲೂ ದೋಷ ಇದೆ. ಗುಜರಾತ್‌ನ ಮಹಿಳೆಯೊಬ್ಬಳು ಮೋಹಿಸಲಿದ್ದಾಳೆ. ಇದೇ ಮೋದಿಗೆ ಮುಳುವಾಗಲಿದೆ ಎಂದು ಬ್ರಹ್ಮಾಂಡ ಗುರೂಜಿ ಭವಿಷ್ಯ ಹೇಳಿದ್ದಾರೆ.

ಇನ್ನು ಮುಂದಿನ ವರ್ಷ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರೇ ಕಿಂಗ್ ಮೇಕರ್ ಆಗಲಿದ್ದಾರೆ. ಅವರ ಮೇಲೆ ಉತ್ತರ ಕರ್ನಾಟಕದ ಜನ ನಂಬಿಕೆ ಇಟ್ಟಿದ್ದಾರೆ. *(-ಪುಟ 4ಕ್ಕೆ)*

ವೈಕುಂಠ ಸಮಾರಾಧನೆಗೆ ಆಹ್ವಾನ

ಶ್ರೀಯುತ ಎನ್.ಗೋವಿಂದಯ್ಯನವರು

ಶ್ರೀಮತಿ ಶಕುಂತಲ ಆರೂಡಿ ,ಸಾಸಲು ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕು,ಬೆಂಗಳೂರು ಗ್ರಾಮಾಂತರ ಜಿಲ್ಲೆ
ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ 04-10-2017ನೇ ಬುಧವಾರ ರಾತ್ರಿ 10.45 ಗಂಟೆಗೆ ನನ್ನ ಪೂಜ್ಯ ಪತಿಯವರಾದ

ಶ್ರೀಯುತ ಎನ್.ಗೋವಿಂದಯ್ಯನವರು

(ಶ್ರೀಮತಿ ಎನ್. ಲಕ್ಷ್ಮಮ್ಮ ಮತ್ತು ದಿ|| ನರಸೀಯಪ್ಪನವರ ಜೇಷ್ಠ ಪುತ್ರ)
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ
"ವೈಕುಂಠ ಸಮಾರಾಧನೆ"ಯನ್ನು ದಿ. 14-10-2017ನೇ ಶನಿವಾರ
ಬೆಳಗ್ಗೆ 10.45 ಗಂಟೆಗೆ ಆರೂಡಿಯ ಮೃತರ ಸ್ವಗೃಹ ದಲ್ಲಿ
ನಡೆಸಲು ಗುರುಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ
ಮೃತರ ಆತ್ಮಕ್ಕೆ ಚಿರಶಾಂತಿ ಬಯಸಬೇಕಾಗಿ ಕೋರುವ,
ಇಂತಿ ದುಃಖ ತಪ್ತರು
ಶ್ರೀಮತಿ ಶಕುಂತಲ ಮತ್ತು ಕುಟುಂಬವರ್ಗದವರು
ಸತ್ಯಪ್ರಕಾಶ್,ಸ್ನೇಹಿತರು ಮತ್ತು ಕುಟುಂಬವರ್ಗದವರು

ಭೋಜನ:
ಮಧ್ಯಾಹ್ನ 1-00 ಗಂಟೆಗೆ

ವಿ.ಸೂ. : ಆಹ್ವಾನಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.